# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1236/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 28/04/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಟಿ. ಜೆ. ಶಂಕರ ಮೂರ್ತಿ ತಂದೆ ಜವರಯ್ಯ, ಶಿಶು ಅಬಿವೃದ್ಧಿ ಯೋಜನಾಧಿಕಾರಿ, ಲಿಂಗಸ್ಗೂರು, ಹೆಚ್ಚುವರಿ ಪ್ರಭಾರ ಮಾನವಿ, ಹಾಲಿ ಕರ್ತವ್ಯದ ಸ್ಥಳ, ಸಿ.ಡಿ.ಪಿ.ಓ ಆಫೀಸ್, ಅರಸೀಕೆರೆ, ಹಾಸನ ಜಿಲ್ಲೆ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬಳ್ಳಾರಿ ವಲಯ, ಬಳ್ಳಾರಿ ಇವರು ರಾಯಚೂರು ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಟಿ. ಜೆ. ಶಂಕರ ಮೂರ್ತಿ ತಂದೆ ಜವರಯ್ಯ, ಶಿಶು ಅಬಿವೃದ್ಧಿ ಯೋಜನಾಧಿಕಾರಿ, ಲಿಂಗಸ್ಗೂರು, ಹೆಚ್ಚುವರಿ ಪ್ರಭಾರ ಮಾನವಿ, ಹಾಲಿ ಕರ್ತವ್ಯದ ಸ್ಥಳ, ಸಿ.ಡಿ.ಪಿ.ಓ ಆಫೀಸ್, ಅರಸೀಕೆರೆ, ಹಾಸನ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ಅಮರೇಶ ಗೌಡ ತಂದೆ ಶರಣಪ್ಪ, ಸಾ: ಹೊಕ್ರಾಣಿ, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರು ನಮಿತಾ ಮಹಿಳಾ ಸ್ವ ಸಹಾಯ ಗುಂಪಿನ ಪ್ರತಿನಿಧಿ, ಸಾ: ಗವಿಗಟ್ಟಿ ಹಾಗೂ ಇತರ ಪ್ರತಿನಿಧಿಗಳು ಸೇರಿ 2014 ರಿಂದ ಮಾನವಿ ತಾಲ್ಲೂಕಿನ ಒಟ್ಟು 243 ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ಸರಬರಾಜು ಮಾಡುತ್ತಿದ್ದು ಈ ಬಗ್ಗೆ ಬಾಕಿ 4.50 ಲಕ್ಷ ರೂ. ಹಣ ಕೊಡಿಸಿ ಕೊಡಲು ಎದುರುದಾರರು ದೂರುದಾರರ ಬಳಿ

ರೂ. 2 ಲಕ್ಷ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಎದುರುದಾರರೊಂದಿಗೆ ಸಂಭಾಷಣೆಯ ಧ್ವನಿ ಮುದ್ರಿತ ಮೊಬೈಲ್‌ನೊಂದಿಗೆ ದೂರನ್ನು ದಿನಾಂಕ: 03/04/2018 ರಂದು ನೀಡಿರುತ್ತಾರೆ. ಈ ಬಗ್ಗೆ ರಾಯಚೂರು ಜಿಲ್ಲೆಯ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಅಧಿಕಾರಿಯವರು ತಮ್ಮ ಠಾಣೆಯ ಗುನ್ನೆ ನಂ. 03/2018 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 03/04/2018 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲಿನಲ್ಲಿ ಆಡಿಯೋ ವಿಡಿಯೋ ರೆಕಾರ್ಡ್ ಮಾಡಿಕೊಂಡಿದ್ದು ಅದನ್ನು ಲ್ಯಾಪ್‌ಟಾಪ್‌ಗೆ ವರ್ಗಾವಣೆ ಮಾಡಿ ಪ್ಲೇ ಮಾಡಿಸಿ ಕೇಳಿದ್ದಲ್ಲದೆ ಲಿಪೀಕರಣ ಮಾಡಿ ಯಥಾವತ್ತಾಗಿ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಅವುಗಳನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 1,00,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ, ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಮಹ್ಮದ್ ಫಾರೂಕ್ ಹುಸೇನ್ ತಂದೆ ಎಂ. ಡಿ. ಜಾಫರ್ ಹುಸೇನ್, ದ್ವಿ.ದ.ಸ., ನಗರಸಭೆ, ರಾಯಚೂರು ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ, ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಗಳು ನೀಡಿದ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿ ಸಂಭಾಷಣೆಯನ್ನು ರೆಕಾರ್ಡ್ ಮಾಡಲು

ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಕೈಯಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಹಂತ ಹಂತವಾಗಿ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದೂರುದಾರರು ದಿನಾಂಕ 03/04/2018 ರಂದು ಸಂಜೆ 4-40 ಘಂಟೆ ಸಮಯದಲ್ಲಿ ಲಿಂಗಸ್ಗೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರ ಕಾರ್ಯಾಲಯದಲ್ಲಿ ದೂರುದಾರನ ಸ್ನೇಹಿತ ಶಿವಲಿಂಗ ತಂದೆ ಯಲ್ಲಪ್ಪ ಮತ್ತು ನೆರಳು ಸಾಕ್ಷಿಯಾದ ಶ್ರೀ ಮಹ್ಮದ್ ಫರೂಕ್ ಹುಸೇನ್ ಇವರ ಸಮಕ್ಷಮದಲ್ಲಿ ಭೇಟಿಯಾದಾಗ ರೂ. 1 ಲಕ್ಷ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟು, ಅದನ್ನು ಪಡೆದು ಟೇಬಲ್ ಮೇಲಿದ್ದ ಒಂದು ಫೈಲನ್ನು ತೆಗೆದು ಅದರಲ್ಲಿ ಇಟ್ಟು, ಸದರಿ ಫೈಲನ್ನು ಎದುರುದಾರರ ಟೇಬಲ್ಲಿನ ಬಲಗಡೆ ಡ್ರಾ ನಲ್ಲಿ ಇಟ್ಟಿರುತ್ತಾರೆ. ನಂತರ ದೂರುದಾರರು ಎದುರುದಾರರ ಆಫೀಸ್ ರೂಮಿನಿಂದ ಹೊರಗೆ ಬಂದು ಕೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ತನಿಖಾಧಿಕಾರಿಯವರಿಗೆ ಸಂಜ್ಞೆ ನೀಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರು ಪಂಚರೊಡನೆ ಎದುರುದಾರರ ಕಛೇರಿಯ ಒಳಗೆ ಹೋಗಿ ತಮ್ಮ ಗುರುತು ಪರಿಚಯ ನೀಡಿ ದೂರಿನ ವಿಷಯ ತಿಳಿಸಿ, ಎದುರುದಾರರ ಹೆಸರು ವಿಳಾಸ ಮುಂತಾದವುಗಳನ್ನು ಪಡೆದು ಸದರಿಯವರಿಗೆ ತನಿಖೆಗೆ ಸಹಕರಿಸಬೇಕೆಂದು ಸೂಚಿಸಿರುತ್ತಾರೆ. ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸ್ವಲ್ಪ ಪ್ರಮಾಣದ ದ್ರಾವಣವನ್ನು ಸ್ಯಾಂಪಲ್‌ಗಾಗಿ ಒಂದು ಖಾಲಿ ಪ್ಲಾಸ್ಟಿಕ್ ಬಾಟಲ್‌ನಲ್ಲಿ ಸಂಗ್ರಹಿಸಿ ಸೀಲ್ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ತಯಾರಿಸಿದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅವು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಇರುತ್ತದೆ. ಸದರಿ ದ್ರಾವಣಗಳನ್ನು ಪ್ರತ್ಯೇಕವಾಗಿ ಸೀಲ್ ಮಾಡಿ ತನಿಖಾಧಿಕಾರಿಯವರ ವಶಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ತನಿಖಾಧಿಕಾರಿಗಳು ಲಂಚದ ಹಣದ ಬಗ್ಗೆ ವಿಚಾರಿಸಲು, "ತನಗೆ ಗೊತ್ತಿಲ್ಲ ಮತ್ತು ಮುಟ್ಟಿರುವುದಿಲ್ಲ ಎಂದು, ದೂರುದಾರರ ಜೊತೆ ಬಂದವರ ಪರಿಚಯ ಇರುವುದಿಲ್ಲ. ಸದರಿಯವರು ಬಂದು ಕುಳಿತಾಗ ತಾವು ಫೈಲ್ ನೋಡುತ್ತಿದ್ದೆನು. ಅದರಲ್ಲಿ ಒಬ್ಬನು ನನ್ನ ಟೇಬಲ್ಲಿನ ಮುಂಭಾಗ ಬಂದು ನಂತರ ಹೊರಗಡೆ ಹೋದರು. ಇಲ್ಲಿ ಯಾವುದೇ ಹಣವನ್ನು

ಇಟ್ಟಿರುವುದಿಲ್ಲ. ಇದನ್ನು ಬಿಟ್ಟು ಬೇರೆ ಏನೂ ನಡೆದಿರುವುದಿಲ್ಲ" ಎಂದು ತಿಳಿಸಿದರೆಂದು ಮಹಜರ್‌ನಲ್ಲಿ ಬರೆದಿರುತ್ತಾರೆ. ಆದರೆ ದೂರುದಾರರ ಮತ್ತು ನೆರಳು ಸಾಕ್ಷಿ ಇವರು ತನಿಖಾಧಿಕಾರಿಯವರಿಗೆ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸನ್ನೆ ಮಾಡಿ ದೂರುದಾರರಿಗೆ ಹಣವನ್ನು ಫೈಲ್‌ನಲ್ಲಿ ಇಡುವಂತೆ ಸೂಚಿಸಿ ಫೈಲನ್ನು ಮುಚ್ಚಿ ತಮ್ಮ ಟೇಬಲ್‌ನ ಬಲಗಡೆಯ ಭಾಗದಲ್ಲಿ ಇಟ್ಟಿರುವುದಾಗಿ ತಿಳಿಸಿದ್ದು, ತನಿಖಾಧಿಕಾರಿಗಳು ಡ್ರಾ ನಲ್ಲಿ ಇಟ್ಟ ಫೈಲನ್ನು ಹಾಜರುಪಡಿಸುವಂತೆ ಸೂಚಿಸಿದಾಗ ಎದುರುದಾರರು ಸಹಕರಿಸದೇ ಇದ್ದುದರಿಂದ ಸಹ ಪಂಚ ಈರಣ್ಣ ಯಾಳಗಿರವರಿಗೆ ಡ್ರಾ ನಲ್ಲಿದ್ದ ಫೈಲನ್ನು ಟೇಬಲ್ ಮೇಲೆ ಇಡಲು ತನಿಖಾಧಿಕಾರಿಗಳು ಸೂಚಿಸಿದ ಮೇರೆಗೆ ಫೈಲನ್ನು ಟೇಬಲ್ ಮೇಲೆ ಇಟ್ಟಿರುತ್ತಾರೆ. ಸದರಿ ಫೈಲ್‌ನ್ನು ತೆಗೆದು ನೋಡಲಾಗಿ ಅದರಲ್ಲಿ ಹಣವಿದ್ದು ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ನೋಟಿನ ವಿವರಗಳಾದ ಮೌಲ್ಯ ಮತ್ತು ಸಂಖ್ಯೆಗಳು ತಾಳೆಯಾಗಿದ್ದು ಇರುತ್ತವೆ. ಸದರಿ ಲಂಚದ ಹಣವನ್ನು ಇಟ್ಟ ಫೈಲ್‌ನ್ನು ಕಾಟನ್‌ನಿಂದ ಒರೆಸಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಅದನ್ನೂ ಕೂಡ ವಶಪಡಿಸಿಕೊಂಡಿರುತ್ತಾರೆ. ಮೊಟ್ಟೆ ಸರಬರಾಜು ಮಾಡಿದ ದಾಖಲಾತಿಗಳ ಬಗ್ಗೆ ಎದುರುದಾರರನ್ನು ವಿಚಾರಿಸಲಾಗಿ ಅವುಗಳು ಮಾನವಿ ಶಿಶು ಅಭಿವೃದ್ಧಿ ಯೋಜನಾ ಕಾರ್ಯಾಲಯದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ದೂರುದಾರರಿಂದ ಮತ್ತು ನೆರಳು ಸಾಕ್ಷಿಯಿಂದ ಅಲ್ಲಿ ನಡೆದ ಸಂಪೂರ್ಣ ಮಾಹಿತಿಯನ್ನು ಪಡೆದು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಸೋನಿ ವಾಯ್ಸ್ ರೆಕಾರ್ಡರ್ ನೀಡಿದ್ದು ಅದನ್ನು ಪಡೆದು ಸಂಭಾಷಣೆಯನ್ನು ಕೇಳಲಾಗಿ ಅದು 29 ನಿಮಿಷ 21 ಸೆಕೆಂಡುಗಳ ಸಂಭಾಷಣೆಯಾಗಿದ್ದು ಪ್ರಾರಂಭದಲ್ಲಿ 1 ನಿಮಿಷ 54 ಸೆಕೆಂಡ್ ಬರೀ ನಡೆದಾಡುವ ಮತ್ತು ಗದ್ದಲ ಕೇಳಿ ಬಂದಿದ್ದು ಇರುತ್ತದೆ. ಮುಂದೆ ಮೊಟ್ಟೆಯ ಬಗ್ಗೆ ಮಾತನಾಡಿರುವುದು ಅವುಗಳ ದರದ ಬಗ್ಗೆ ಮತ್ತು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಪಡೆದ ಬಗ್ಗೆ ಸವಿಸ್ತಾರ ಸಂಭಾಷಣೆ ಇರುವುದಾಗಿ ತನಿಖಾಧಿಕಾರಿಗಳು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳು ಲಿಪೀಕರಣ ಮಾಡುವುದಲ್ಲದೆ ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗಳಿಗೆ ವರ್ಗಾಯಿಸಿ ಸಿ.ಡಿ.ಗಳನ್ನು ವಶಪಡಿಸಿಕೊಂಡಿರುತ್ತಾರೆ. ಹಂತ ಹಂತವಾಗಿ ಫೋಟೋಗಳನ್ನು ಸಹ ತೆಗೆಸಿರುತ್ತಾರೆ. ಈ ಬಗ್ಗೆ ಎದುರುದಾರರಿಗೆ ಸ್ವರಕ್ಷಣಾ ಹೇಳಿಕೆ ನೀಡುವಂತೆ ಹೇಳಿದ್ದು ಸದರಿಯವರು ಪೂರಕವಾಗಿ ತಮ್ಮ ಹಸ್ತಾಕ್ಷರದಲ್ಲಿ ಮೂಡಿದ್ದು ಇರುತ್ತದೆ. ಪಂಚನಾಮೆ ಕಾಲದಲ್ಲಿ ಶ್ರೀ ಎಂ.ಡಿ. ಗೋಕುಲ್ ತಂದೆ ಹುಸೇನ ಸಾಬ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಲಿಂಗಸ್ಗೂರು ಇವರು ಇದ್ದು, ಅವರ

ಪರಿಚಯ ಪಡೆದು, ಸೋನಿ ವಾಯ್ಸ್ ರೆಕಾರ್ಡರ್‌ನ್ನು ಲ್ಯಾಪ್‌ಟಾಪ್ ನಲ್ಲಿ ಪ್ರತ್ಯೇಕವಾಗಿ ಪ್ಲೇ ಮಾಡಿ ಕೇಳಿಸಿದ್ದು ಸದರಿ ಧ್ವನಿ ಮುದ್ರಣದಲ್ಲಿ ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳು ಸವಿಸ್ತಾರ ಪಂಚನಾಮೆ ಬರೆದು ಮುದ್ದೇ ಮಾಲುಗಳನ್ನು ವಶಪಡಿಸಿಕೊಂಡು ಸಂಜೆ 4-40 ರಿಂದ ರಾತ್ರಿ 8-30 ರವರೆಗೆ ಲಿಂಗಸ್ಗೂರು ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಾರ್ಯಾಲಯದಲ್ಲಿ ನಿರ್ವಹಿಸಿ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

5) ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

6) ದಿನಾಂಕ 17/07/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 02/11/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದಿನಾಂಕ 03/04/2018 ರಂದು ಸಂಜೆ 4.40 ಗಂಟೆಯಲ್ಲಿ ಲಿಂಗಸೂಗೂರು ಶಿಶು ಅಭಿವೃದ್ಧಿ ಯೋಜನಾಲಯದ ಕಾರ್ಯಾಲಯದಲ್ಲಿ ದೂರುದಾರ, ಸ್ನೇಹಿತ ಶಿವಲಿಂಗ, ನೆರಳು ಸಾಕ್ಷಿ ಮಹಮದ್ ಪರೂಕ್ ಹುಸೇನ್ ರವರ ಸಮಕ್ಷಮದಲ್ಲಿ ರೂ. 1.0 ಲಕ್ಷ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಟೇಬಲ್ ಮೇಲಿದ್ದ ಒಂದು ಫೈಲ್‌ನಲ್ಲಿ ತೆಗೆದುಕೊಂಡು, ಆನಂತರ ಆ ಫೈಲನ್ನು ಟೇಬಲಿನ ಬಲಗಡೆಯ ಡ್ರಾನಲ್ಲಿ ಇಟ್ಟುಕೊಂಡಿರುವುದು ಮತ್ತು ಆ ಲಂಚದ ಹಣವನ್ನು ಜಪ್ತಿ ಪಂಚನಾಮೆ ಮೂಲಕ ವಶಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ ಎಂಬುದರಲ್ಲಿ ಸತ್ಯ ಇರುವುದಿಲ್ಲ. ಜಪ್ತಿ ಪಂಚನಾಮೆಯನ್ನು ನಾನು ಒಪ್ಪುವುದಿಲ್ಲ. ಇದು ಪಾರದರ್ಶಕವಾಗಿ ನಡೆಸಿದ ಪಂಚನಾಮೆ ಆಗಿರುವುದಿಲ್ಲ. ಈ ಪಂಚನಾಮೆಯ ದಾಖಲೆಯಲ್ಲಿರುವ ನನ್ನ ಸಹಿಗಳು ನಕಲಿ ಮಾಡಿರುವ ಸಹಿಗಳಾಗಿರುತ್ತವೆ. ಈ ಟಿಪ್ಪಣಿ ಅಂಶವನ್ನು ಸಂಪೂರ್ಣವಾಗಿ ನಿರಾಕರಿಸುತ್ತೇನೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಸದರಿಯವರ ಸಮಜಾಯಿಷಿಗೆ ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

8) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

9) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phanindra 28/4/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.